◆ ಸ್ತ್ರೀವಾದದ ಅಧ್ಯಯನ ನಿಮ್ಮ ಮೇಲೆ ಬೀರಿದ ಪ್ರಭಾವದ ಬಗ್ಗೆ ಹೇಳಿ.

ಕಲಿತಿರುವುದನ್ನು ಪುನರಾವಲೋಕನ ಮಾಡಬೇಕು. ನನ್ನ ಜ್ಞಾನಮೀಮಾಂಸೆಯನ್ನ ನಾನು ಕಟ್ಟಿಕೊಳ್ಳಬೇಕು. ಅದರ ಮೂಲಕ ಲೋಕ ನೋಡಬೇಕು. ಇಲ್ಲಿವರೆಗೂ ಕಲಿತಿರುವ ತಪ್ಪುಪಾಠಗಳನ್ನು **unlearn** ಮಾಡಬೇಕು. ಇದನ್ನು ಕಲಿಸಿದ್ದು ಸ್ತ್ರೀವಾದ. **Redefine and unlearning** ಮಹತ್ವವನ್ನು ಸ್ತ್ರೀವಾದ ಕಲಿಸಿತು.

ನನ್ನೊಳಗೆ ರಕ್ತಗತವಾಗಿರುವ ಪಾಠವನ್ನು ಮರೆತುಬಿಡುವುದು ಅಷ್ಟು ಸುಲಭವಲ್ಲ. ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳು ಗಂಡು ಹೆಣ್ಣು ಇಬ್ಬರನ್ನೂ ಗಾಢವಾಗಿ ಆವರಿಸಿಕೊಂಡಿರುತ್ತವೆ. ಎಷ್ಟೇ ಓದಿದರೂ, ತಿಳಿದುಕೊಂಡಿದ್ದರೂ ಆ ಪಾಠಗಳು ನಮ್ಮ ವರ್ತನೆಗಳಲ್ಲಿ ಇಣುಕಿಬಿಡಬಹುದು. ಪ್ರಜ್ಞಾಪೂರ್ವಕವಾಗಿಯೇ ಅದನ್ನು ಮೀರಬೇಕಾಗುತ್ತದೆ. ಈ ಮೀರುವ ಹಂಬಲ ಮಾತ್ರ ನಮ್ಮನ್ನು ಮುಂದಕ್ಕೆ ಕರೆದುಕೊಂಡು ಹೋಗಬಹುದು. ಈ ಪಾಠಗಳು ಎಷ್ಟು ಗಾಢವಾಗಿ ನಮ್ಮಲ್ಲಿ ಬೇರೂರಿರುತ್ತದೆ ಎನ್ನುವುದಕ್ಕೊಂದು ಸಣ್ಣ ಉದಾಹರಣೆ ಕೊಡ್ತಿನಿ. ಸಾಂಪ್ರದಾಯಿಕ ಉಡುಪಿಗೆ ಒಗ್ಗಿಹೋಗಿದ್ದ ನನಗೆ ನಾನೆಂದಾದರೂ ನನ್ನ ಉಡುಪನ್ನು ಬದಲಿಸಬಹುದು ಅನ್ನುವ ಯೋಚನೆ ನನ್ನ ಐವತ್ತೈದನೆಯ ವಯಸ್ಸಿನವರೆಗೂ ಬಂದಿರಲಿಲ್ಲ. ಕಾಲೇಜಿಗೆ ಓದಲು ಹೋದಾಗ ಸೀರೆ ಉಡಲು ಶುರುಮಾಡಿದ್ದು. ಕಾಲೇಜಿಗೆ ಸೇರಲು ಮನೆಯಲ್ಲಿ ಒಪ್ಪಿ ಅವರು ಹಾಕಿದ ಮೊದಲ ಷರತ್ತೇ ಸೀರೆ ಉಟ್ಟು, ಸೆರಗು ಹೊದ್ದುಕೊಂಡೇ ಕಾಲೇಜಿಗೆ ಹೋಗಬೇಕು ಅಂತ. ಹೀಗೆ ನಮಗೆ ಕಲಿಸಲಾಗುವ ಮೌಲ್ಯಗಳನ್ನು **unlearn** ಮಾಡಬೇಕು ಅಂದುಕೊಂಡಾಗ ಮಾಡಿದ ಮೊದಲ ಪ್ರಯೋಗ ನನ್ನ ಈ ಸಾಂಪ್ರದಾಯಿಕ ಉಡುಗೆಯನ್ನು ಬದಲಾಯಿಸಕೊಳ್ಳಲು ಸಾಧ್ಯವಾ ಅಂತ ಪರೀಕ್ಷೆ ಮಾಡಿಕೊಂಡಿದ್ದು. ಚೂಡಿದಾರ್ ಮನೆಗೆ ತಂದಿಟ್ಟುಕೊಂಡರೂ ಅದನ್ನು ಹಾಕಿಕೊಂಡು ಹೊರಗೆ ಹೋಗಲು ನನಗೆ ಆರು ತಿಂಗಳು ಬೇಕಾಯಿತು. ಯಾರೂ ನನಗೆ ಆ ಬಟ್ಟೆ ಹಾಕ್ಕೋಬೇಡ ಅಂತ ನಿಯಂತ್ರಿಸುವವರಗಾಲಿ ನಿರ್ಬಂಧಿಸುವವರಾಗಲಿ ಇರಲಿಲ್ಲ. ಆದರೂ ಆ ಬಟ್ಟೆ ಹಾಕಿಕೊಂಡು ಹೊರಗೆ ಹೋಗಲು ಅಷ್ಟು ಸಮಯ ಬೇಕಾಯಿತು. ಹಾಗಾದರೆ ನನ್ನನ್ನು ತಡೆದವರಾರು? ಮದುವೆಯಾಗಿ ಮಗುವಾದ ಮೇಲೆ ನೀನು ಕೆಲಸಕ್ಕೆ ಹೋಗಬೇಡ ಮನೆಯಲ್ಲಿಯೇ ಇರು ಅಂತ ಯಾರೂ ಹೇಳದೆ ಇದ್ದರೂ ಮನೆಯಲ್ಲಿ ಉಳಿದರೆ ಅಂತಹ ಪರಿಸ್ಥಿತಿಗೆ ಯಾರನ್ನು ಹೊಣೆಯಾಗಿಸುವಿರಿ? ಪುರುಷನ ವಿರುದ್ಧ ನಿಲ್ಲುವುದಕ್ಕೂ ವ್ಯವಸ್ಥೆ ಸ್ಥಾಪಿಸಿರುವ ಸಂಸ್ಥೆಗಳು ಮತ್ತು ಅವುಗಳ ತಂತ್ರಗಾರಿಕೆಗಳ ವಿರುದ್ಧ ನಿಲ್ಲುವುದಕ್ಕೂ ವ್ಯತ್ಯಾಸವಿದೆ.

ತಾಯ್ತನ ಕುರಿತಂತೆ ಕೂಡ ನಮ್ಮಲ್ಲಿ ಇಂತಹ ಕಲಿಕೆಗಳು ಇರುತ್ತವೆ. ಅದನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸಲು ಸಾಧ್ಯವೇ? ಮಗುವನ್ನು ಬೆಳೆಸುವ ವಿಧಾನದ ಬಗ್ಗೆ, ಹೆಂಡತಿಯಾಗಿರುವುದರ ಬಗ್ಗೆ ಮರುವ್ಯಾಖ್ಯಾನಗಳನ್ನು ಮಾಡಿಕೊಳ್ಳಲು ಸಾಧ್ಯವೇ? ಇವೆಲ್ಲವನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುವುದು **unlearning**. ಇದೊಂದು ನಿರಂತರ ಪ್ರಕ್ರಿಯೆ. ನಿಮ್ಮ ವರ್ತನೆ, ಮಾತುಕತೆ, ಕ್ರಿಯೆಗಳನ್ನು ಸದಾ ಎಚ್ಚರದಿಂದ ಗಮನಿಸುತ್ತ ನಾನೇನು ಮಾಡ್ತಿದಿನಿ ಅನ್ನೊದರ ಬಗ್ಗೆ ಎಚ್ಚರದಿಂದ ಇರುವುದು. ಹೆಣ್ಣಿಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ಅಲಂಕಾರ, ವರ್ತನೆ, ತಾಯ್ತನ ಮೊದಲಾದ ವ್ಯಾಖ್ಯೆಗಳನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸಬೇಕು.

ನನಗೇನು ಬೇಕು? ನಾನು ಹೇಗೆ ಬದುಕಬೇಕು ಅನ್ನೋದನ್ನು ತಿಳಿಯೋದಿಕ್ಕೆ ಈ ವ್ಯವಸ್ಥೆ ಬಿಟ್ಟಿಲ್ಲ. ಈಗ ಅದನ್ನೆಲ್ಲ ಒಂದೊಂದಾಗಿ ಕಲಿಯಬೇಕು. ಅದಕ್ಕಾಗಿ ಗಂಡಸನ್ನಾಗಲಿ, ಸಂಸಾರವನ್ನಾಗಲಿ, ತಾಯ್ತನವನ್ನಾಗಲಿ ದ್ವೇಷ ಮಾಡಬೇಕಾಗಿಲ್ಲ. ಅವನ್ನೆಲ್ಲ ಮರುವ್ಯಾಖ್ಯಾನಕ್ಕೆ ಒಳಪಡಿಸಬೇಕು.